between the Superintendent of the Government Dairy and the workers. Your dairy workers have done this mischief but not this seller. If the Hon'ble Minister were to set up an inquiry to find out who was the real culprit, he would be doing a great service to the public of Belgaum. On account of this incident, the people are not buying the milk from the dairy.

SRI Y. RAMAKRISHNA.—My hon'ble friend said that my statement is 50% correct. I have no knowledge of the friction that exists between the Superintendent and the workers and I strongly refute the charge made by my friend. However, I will try to know the truth. If it is so, I will take action.

SRI B. B. SAYANAK.—I have learnt through the Deputy Commissioner that there is no co-operation between the Animal Husbandry Department and the Dairy Department. I request the Minister kindly to direct the officers of the Animal Husbandry Department to extend their co-operation to the Dairy.

SRI Y. RAMAKRISHNA.—That, I will look into.

## MATTER UNDER RULE 312

*re : Adulteration of Sugar Manufactured by the Chamundeswari Sugar Factory Ltd. Maddur Taluk, Mandya District.*

† ಶ್ರೀ ಜಿ. ಮಾದೇಗೌಡ.—ಮಾನ್ಯ ಸಭಾಧ್ಯಕ್ಷರೇ, ನಮ್ಮ ತಾಲ್ಲೂಕಿನಲ್ಲಿರುವ ಈ ಕಲಮುದ್ದಣ ದೊಡ್ಡಿಯಲ್ಲಿ ಸಕ್ಕರೆ ಕಾರ್ಖಾನೆಯು ಒಂದು ಸಂಸಾರದವರ ಸಾರ್ವಭೌಮತ್ವದಲ್ಲಿ ನಡೆಯತಕ್ಕ ಕಂಪನಿಯಾಗಿ ಬಿಟ್ಟಿದೆ ಆದರೆ ಈ ಕಂಪನಿ ಸ್ಥಾಪನೆಯಾಗುವುದಕ್ಕೆ ನಾವು ಕೂಡ ಭಾಗಿಯಾಗಿ, ಆಲ್ಲಿಯ ಜನಗಳ ಆರ್ಥಿಕ ಸ್ಥಿತಿ ಉತ್ತಮವಾಗಬೇಕು ಎನ್ನುವ ಉದ್ದೇಶದಿಂದ ಕೆಲಸ ಮಾಡಿ ಈ ಫ್ಯಾಕ್ಟರಿಯನ್ನು ಸ್ಥಾಪನೆ ಮಾಡಿದ್ದೆವು. ಆದು ಸ್ಥಾಪನೆಯಾದ ಮೇಲೆ ಖಾಸಗಿ ಸಂಸ್ಥೆಯಾಗಿ ರೈತರ ಪೋಷಣೆ ಚನ್ನಾಗಿ ನಡೆದಿದೆ. ರೈತರು ಬೆಳೆದ ಕಬ್ಬಿಗೆ ಸರಿಯಾಗಿ ದುಡ್ಡನ್ನು ಪಾವತಿ ಮಾಡುತ್ತಿಲ್ಲ. ಮತ್ತೆ ಸರ್ಕಾರಕ್ಕೆ ವಾಟರ್ ರೇಟನ್ನು, ಮತ್ತು ರವಿನ್ಯೂ ಹಣವನ್ನು ಫ್ಯಾಕ್ಟರಿಯವರು ವಸೂಲು ಮಾಡುತ್ತಿದ್ದರೂ ಸಹ ಸರ್ಕಾರಕ್ಕೆ ಆ ದುಡ್ಡನ್ನು ಕಟ್ಟುತ್ತಿಲ್ಲ ಈ ರೀತಿಯ ಮಿಸ ಅಪ್ರೊಪ್ರಿಯೇಷನ್ ಮಾಡುತ್ತಿದ್ದಾರೆ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೂ ಬರೆದು ತಿಳಿಸಿದ್ದೇವೆ ಮತ್ತು ಇದರ ಬಗ್ಗೆ ಅವರು ಕ್ರಮ ತೆಗೆದು ಕೊಳ್ಳುವವರಿದ್ದಾರೆ. ನಿನ್ನೆ ಮೊನ್ನೆ ಕೂಡ ಈ ಸಕ್ಕರೆಯ ಕಲಬೆರಕೆಯ ಬಗ್ಗೆ ಪತ್ರಿಕೆಯಲ್ಲೂ ಕೂಡ ಬಂದಿದೆ. ಈ ವಿಷಯದಲ್ಲಿ ಅವರು ಎಲ್ಲಿಯವರೆಗೆ ಹೋಗಿದ್ದಾರೆ ಎಂದರೆ ಖಾಸಗಿ ಸಂಸ್ಥೆಯವರು ರೈತರಿಗೆ ಮೋಸ ಮಾಡತಕ್ಕಂಥದ್ದು ಇರಲಿ, ಸರ್ಕಾರಕ್ಕೂ ಮೋಸ ಮಾಡಿ, ಇಡೀ ರಾಜ್ಯದ ಜನಕ್ಕೇ ವಿಷ ಹಾಕತಕ್ಕಂಥ ಪ್ರಯತ್ನದವರೆಗೆ ಈ ಕಾರ್ಖಾನೆಯ ಆಡಳಿತ ಮಂಡಳಿಯವರು ಹೋಗಿದ್ದಾರೆ. ಅದರ ಬಗ್ಗೆ ಸರ್ಕಾರದವರ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತಿದ್ದೇನೆ ೧೫ನೇ ತಾರೀಖು ಮಂಡ್ಯಾದಲ್ಲಿ ಸುಮಾರು ೩೦೦ ಮೂಟೆ ಕಬ್ಬಿಣ ಅದಿರು ಇರತಕ್ಕಂಥ ಮೂಟೆಗಳನ್ನು ಕೆಲವು ಸಣ್ಣ ಅಧಿಕಾರಿಗಳು ಅದನ್ನು ಪತ್ತೆ ಮಾಡಿದ್ದಾರೆ. ಅದರ ಮಾರನೆಯ ದಿವಸ ಸಕ್ಕರೆ ಕಂಪನಿಯ ಆಡಳಿತ ಮಾಲೀಕ ವರ್ಗದವರು ಎಲ್ಲಿಯವರೆಗೆ ಹೋಗಿದ್ದಾರೆ ಎಂದರೆ ಮಾರನೆಯ ದಿವಸವೇ ಅವುಗಳನ್ನು ರಿಪ್ಲೇಸ್ ಮಾಡಿ ವಾಪಸ್ಸು ತೆಗೆದುಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ನಾನು ಇದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಹೇಳಿದೆ. ಪೋಲೀಸ್ ಸೂಪರಿಂಟೆಂಡೆಂಟ್‌ರವರಿಗೆ ಫೋನ್ ಮಾಡಿದೆ ಆದರೆ ಅವರೆಲ್ಲರೂ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ನಮಗೆ ಅಧಿಕಾರವಿಲ್ಲವೆಂದು ಹೇಳುತ್ತಿದ್ದಾರೆ, ಮತ್ತೆ

ಹೆಲ್ತ್ ಆಫೀಸರ್‌ರವರಿಗೆ ಹೇಳಿದ್ದಕ್ಕೆ ಆದರೂ ಸಹ ನಮಗೆ ಅಧಿಕಾರವಿಲ್ಲವೆಂದು ಹೇಳಿದ್ದಾರೆ, ಹಾಗಿದ್ದರೆ ನೀವು ಇನ್ನು ಯಾರಿಗೆ ಅಧಿಕಾರವನ್ನು ವಹಿಸಿಕೊಟ್ಟಿದ್ದೀರಿ ಎನ್ನುವುದನ್ನು ತಿಳಿಸಬೇಕು.

೩–೩೦ ಪಿ.ಎಂ.

ಇವತ್ತಿನ ದಿವಸ ಕಾರ್ಖಾನೆಗಳಲ್ಲಿ ನೂರಾರು ಮೂಟೆ ಸಕ್ಕರೆ ಕಲಬೆರಕೆಯಾಗಿದೆ ಎಂದು ಸಾರ್ವಜನಿಕರು ಸರ್ಕಾರದ ಗಮನಕ್ಕೆ ತಂದರೂ ಕೂಡ ಸರ್ಕಾರದವರು ಅವರ ಬಗ್ಗೆ ಯಾವ ಕ್ರಮಗಳನ್ನು ತೆಗೆದುಕೊಳ್ಳದೆ ಮೌನವಾಗಿ ಕುಳಿತಿದ್ದಾರೆ. ಅದನ್ನು ಕೆಮಿಕಲ್ ಟೆಸ್ಟಿಗೆ ಕಳುಹಿಸಿದ್ದೇವೆ, ಅದರ ವರದಿ ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಈ ಮಧ್ಯದಲ್ಲಿ ಕಬ್ಬಿಣ ಮಿಶ್ರವಾಗಿರುವ ಸಕ್ಕರೆ ಏನಿದೆ ಅದು ಮಾಯವಾಗುತ್ತಿದೆ ; ಅದನ್ನು ಬಹುಶಃ ಮಾನ್ಯ ಮುಖ್ಯ ಮಂತ್ರಿಗಳು ನೋಡಿದ್ದಾರೆಂದು ತಿಳಿದಿದ್ದೇನೆ. ಕೆಮಿಕಲ್ ಟೆಸ್ಟಿಗೆ ಹೋಗಿರುವ ಕಡೆ ಕೂಡ ಪ್ರಭಾವ ಬೀರಿ ಅದನ್ನು ಮುಚ್ಚುವ ಪ್ರಯತ್ನ ನಡೆದಿದೆ ಎಂಬ ವಿಚಾರ ಕೂಡ ನಮ್ಮ ಗಮನಕ್ಕೆ ಬಂದಿದೆ. ಆದರೂ ಕೂಡ ಸರ್ಕಾರದವರು ಏಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಂಡಿಲ್ಲವೆಂದು ಕೇಳುತ್ತೇನೆ. ಮತ್ತು ಅತಿ ಹೆಚ್ಚಿನ ಮಟ್ಟದಲ್ಲಿ ಈ ಸಕ್ಕರೆಯು ಒಂದು ಕಲಬೆರಕೆ ಕೆಲಸ ಏನಾಗಿದೆ ಇದನ್ನು ತಡೆಗಟ್ಟದೆ ಸರ್ಕಾರದವರು ಏಕೆ ಮೌನವಾಗಿದ್ದಾರೆಂದು ಕೇಳುತ್ತೇನೆ.

ಶ್ರೀ ಪಿ. ರಾಮದೇವ್.—ಈಗಾಗಲೇ ಈ ವಿಚಾರವನ್ನು ಈ ಸಭೆಯ ಮುಂದೆ ಮಾನ್ಯ ಚಂದ್ರಶೇಖರ್‌ರವರು ಮತ್ತು ನಾನು ತಂದಿದ್ದೇವೆ. ಆದರೂ ಈ ಸಕ್ಕರೆಯನ್ನು ಪುನಃ ಮಾರಾಟ ಮಾಡಿದ್ದಾರೆ. ಅದು ಎಲ್ಲ ಕಲಬೆರಕೆಯಾಯಿತು ? ವ್ಯಾಪಾರಿಗಳು ಮಾಡಿದರೆ ? ಅಥವಾ ಸಕ್ಕರೆಯನ್ನು ಸರಬರಾಜು ಮಾಡಿರತಕ್ಕ ಸಂಸ್ಥೆಯವರು ಮಾಡಿದರೆ ಅಥವಾ ಕಾರ್ಖಾನೆಯವರು ಮಾಡಿದರೆ ? ಮಾನ್ಯ ಮಾದೇಗೌಡರು ಹೇಳಿದ ಹಾಗೆ ಸಕ್ಕರೆ ಕಾರ್ಖಾನೆಯಲ್ಲೇ ಕಲಬೆರಕೆ ಆಯಿತೆ ? ಎಂಬುದನ್ನು ಸರ್ಕಾರ ತಿಳಿಸಬೇಕು. ಏಕೆಂದರೆ ಕಲಬೆರಕೆ ಎಲ್ಲದರಲ್ಲೂ ಬಂದಿದೆ. ಇತ್ತೀಚೆಗೆ ಸಕ್ಕರೆಯಲ್ಲಿ ಬಂದಿರುವುದು ಬಹಳ ದುರಾದೃಷ್ಟ. ಸಕ್ಕರೆಯಲ್ಲಿ ಇದುವರೆಗೆ ಆಗುತ್ತಿರಲಿಲ್ಲ. ಕಬ್ಬಿಣದ ಚೂರುಗಳಲ್ಲದೆ ಬಿಳಿ ಹರಳುಗಳು ಕೂಡ ಮಿಶ್ರವಾಗಿರುತ್ತವೆ ; ಅವನ್ನು ಪತ್ತೆ ಮಾಡುವುದು ಸಹ ಕಷ್ಟ, ಮ್ಯಾಗ್ನೆಟ್ ಹಾಕಿದಾಗ ಮಾತ್ರ ಅವು ಪತ್ತೆಯಾಗುತ್ತವೆ. ಇಂಥ ಒಂದು ಕಲಬೆರಕೆ ಏಕೆ ಆಯಿತು ? ಕಲಬೆರಕೆ ಮಾಡಿದವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಕಬ್ಬಿಣ ತಿಂದರೂ ಕರಗಿಸಿಕೊಳ್ಳುವ ಶಕ್ತಿ ಇರಬೇಕು' ಎಂಬ ಒಂದು ಗಾದೆ ಇದೆ. ಆ ರೀತಿ ಕಬ್ಬಿಣ ತಿಂದರೆ ಗಟ್ಟಿಯಾಗಿರಬಹುದೆಂಬ ಅಭಿಪ್ರಾಯವೇನಾದರೂ ಸರ್ಕಾರಕ್ಕೆ ಇದೆಯೆ ? ಸಮ್ಮ ಮನೆಯಲ್ಲಿ ತಂದಿರುವ ಸಕ್ಕರೆ ಹಾಗೆ ಇದೆ. ಒಟ್ಟಿನಲ್ಲಿ ಎಲ್ಲವನ್ನು ದಯವಿಟ್ಟು ವಿಶದವಾಗಿ ತಿಳಿಸಬೇಕು.

ಶ್ರೀ ಎಂ. ಚಂದ್ರಶೇಖರ್.—ಸಂಕೇಶ್ವರದಲ್ಲಿ ಕೂಡ ಕಲಬೆರಕೆಯಾಗಿದೆ ಎಂದರೆ ಕರ್ನಾಟಕದ ಬೇರೆ ಬೇರೆ ಕಾರ್ಖಾನೆಗಳಲ್ಲಿ ಯಾವ ರೀತಿ ಕೆಲಸ ನಡೆಯುತ್ತಿದೆ ಎಂಬ ಬಗ್ಗೆ ಸರ್ಕಾರ ಗಮನ ಹರಿಸಿ ಪರೀಕ್ಷೆ ಮಾಡಿಸಬೇಕು. ಫ್ಯಾಕ್ಟರಿ ಮಟ್ಟದಲ್ಲಿ ಕಲಬೆರಕೆಯಾಗುವುದಕ್ಕೆ ಕೆಲವು ಕಾರಣಗಳಿರುತ್ತವೆ. ಅಲ್ಲಿಲ್ಲಿ ವರ್ಕ್‌ಷಾಪ್‌ಗಳೇನಿರುತ್ತವೆ ಅಲ್ಲಿ ಯಾವುದಾದರೂ ಒಂದು ಯಂತ್ರವನ್ನು ರಿಪೇರಿ ಮಾಡುವ ಸ್ಥಳದಲ್ಲಿ ಕಬ್ಬಿಣದ ಚೂರುಗಳು ಕಾಣುವುದು ಉಂಟು. ಅಲ್ಲಿ ಅವರು ಸ್ಪಾಕ್ ಮಾಡುವ ರೀತಿಯಲ್ಲಿ ಏನಾದರೂ ಕಲಬೆರಕೆಯಾಗಿದೆಯೇ ಅಥವಾ ಉದ್ದೇಶ ಪೂರ್ವಕವಾಗಿಯೇ ಕಲಬೆರಕೆ ಮಾಡಿದ್ದಾರೆಯೇ ಎಂಬುದನ್ನು ಸರ್ಕಾರ ಪತ್ತೆ ಹಚ್ಚಿ ತಿಳಿಸಬೇಕು. ಇಪತ್ತಿನ ದಿವಸ ಎರಡು ಕಾರ್ಖಾನೆಗಳಲ್ಲಿ ಆಗಿದೆ ಎಂದು ಎರಡು ಕಡೆಗಳಿಂದ ದೂರುಗಳು ಬಂದಿವೆ. ಅದೇ ರೀತಿ ಮಿಕ್ಕ ಕಾರ್ಖಾನೆಗಳಲ್ಲಿಯೂ ಕೂಡ ಹಾಗೆ ಇದೆಯೇ ಹೇಗೆ ಎಂಬುದನ್ನು ಪರೀಕ್ಷೆ ಮಾಡಿಸಬೇಕು.

ಶ್ರೀ ಸಿ. ಎಂ. ಇಬ್ರಾಹಿಂ (ಆಹಾರ ಹಾಗೂ ಸಣ್ಣ ಕೈಗಾರಿಕೆಗಳ ಮಂತ್ರಿಗಳು).—ಕಲಬೆರಕೆ ಸಕ್ಕರೆ ಮಾರಾಟವಾಗುತ್ತಿರುವ ಬಗ್ಗೆ ಬೆಂಗಳೂರಿನ, ಮಂಡ್ಯ ಮುಂತಾದ ಕಡೆಗಳಿಂದ ವರದಿ ಬರುತ್ತಿವೆ. ಶ್ರೀ ನಾಗರಾಜ ನ್ಯಾಯ ಬೆಲೆ ಅಂಗಡಿಯವರು ಸಣ್ಣ ಸಣ್ಣ ಕಬ್ಬಿಣದ ಚೂರುಗಳಿರುವ ಸಕ್ಕರೆಯನ್ನು ಮಾರಾಟ ಮಾಡಿದ್ದಾರೆಂಬ ದೂರು ಬೆಂಗಳೂರು ಉತ್ತರ ರೇಂಜಿನ ರೇಂಜ್ ಅಧಿಕಾರಿಯವರ ಹತ್ತಿರ ಬಂದಿತ್ತು. ವಿಚಾರಣೆಯಾಗುವವರೆಗೆ ಸಕ್ಕರೆಯನ್ನು ಮಾರಾಟ ಮಾಡಕೂಡದೆಂದು ರೇಂಜ್ ಅಧಿಕಾರಿ

ಯವರು ತಕ್ಷಣ ಆಜ್ಞೆ ನೀಡಿದ್ದಾರೆ. ಪ್ರಕಾಶನಗರದಲ್ಲಿರುವ ಕೆ ಎಫ್.ಸಿ.ಎಸ್.ಸಿ. ಸಗಟು ಮಾರಾಟ ಕೇಂದ್ರದಿಂದ ಆ ಸಕ್ಕರೆಯನ್ನು ಪಡೆಯಲಾಗಿತ್ತು ಮತ್ತು ಈ ಸಗಟು ಮಾರಾಟ ಕೇಂದ್ರಕ್ಕೆ ಆ ಸಕ್ಕರೆ ಸಂಕೇಶ್ವರ ಸಕ್ಕರೆ ಕಾರ್ಖಾನೆಯಿಂದ ಬಂದಿತ್ತೆಂದು ಗೊತ್ತಾಗಿದೆ ಈ ಸಂಬಂಧವಾಗಿ ರೇಂಜ್ ಅಧಿಕಾರಿ ಯವರು ಸಗಟು ಮಾರಾಟ ಕೇಂದ್ರಕ್ಕೆ ಭೇಟಿ ಇತ್ತಾಗ ಕೇವಲ ಒಂದು ಮೂಟೆ ಸಕ್ಕರೆ ಮಾತ್ರ ಇರುವುದು ಕಂಡು ಬಂದಿತು. ಆ ಸಕ್ಕರೆ ಮೂಟೆಯನ್ನು ಯಾವುದೇ ನ್ಯಾಯ ಬೆಲೆ ಅಂಗಡಿಗೂ ಸರಬರಾಜು ಮಾಡ ಬಾರದೆಂದು ಸೂಚನೆ ನೀಡಲಾಗಿದೆ.

ಸಣ್ಣ ಸಣ್ಣ ಕಬ್ಬಿಣದ ಚೂರುಗಳಿರುವ ಆ ಸಕ್ಕರೆ ಸ್ಯಾಂಪಲನ್ನು ತಕ್ಷಣದ ಪರೀಕ್ಷೆಗೆ ಹಾಗೂ ವರದಿ ಗಾಗಿ, ಪಬ್ಲಿಕ್ ಅನಲಿಸ್ಟ್ ಅವರಿಗೆ ಕಳುಹಿಸಲಾಗಿದೆ.

ಉತ್ತರ ರೇಂಜಿನ ರೇಂಜ್ ಅಧಿಕಾರಿಯವರು ನ್ಯಾಯ ಬೆಲೆ ಅಂಗಡಿಗಳನ್ನು ತನಿಗೆ ಮಾಡಿದಾಗ ಇನ್ನೂ ಕೆಲವು ವ್ಯಾಪಾರಿಗಳ ಬಳಿ ದಾಸ್ತಾನಿರುವ ಬೆಳಗಾಂವಿ ಜಿಲ್ಲೆ ಸಂಕೇಶ್ವರದ ಹಿರಣ್ಯಾಕ್ಷಿ ಎಸ್‌ಎಸ್‌ಕೆ ಲಿಮಿಟೆಡ್‌ನವರು ಸರಬರಾಜು ಮಾಡಿರುವ ಲೆವಿ ಸಕ್ಕರೆಯಲ್ಲಿ ಕಬ್ಬಿಣದ ಸಣ್ಣ ಕಣಗಳಿರುವುದು ಕಂಡು ಬಂದಿದೆ. ಆ ದಾಸ್ತಾನಿನಿಂದ ಸಕ್ಕರೆಯನ್ನು ಸರಬರಾಜು ಮಾಡುವುದನ್ನು ನಿಲ್ಲಿಸಲಾಗಿದೆ. ಮತ್ತು ವಿಶ್ಲೇಷಣೆಗಾಗಿ ಸ್ಯಾಂಪಲನ್ನು ಸೀನಿಯರ್ ಕೆಮಿಸ್ಟ್ ಮತ್ತು ಪಬ್ಲಿಕ್ ಅನಲಿಸ್ಟ್ ಅವರಿಗೆ ಕಳುಹಿಸ ಲಾಗಿದೆ. ಅದನ್ನು ಪರೀಕ್ಷಿಸಿದ ಪಬ್ಲಿಕ್ ಅನಲಿಸ್ಟ್ ಅವರು ಸಕ್ಕರೆಯಲ್ಲಿ ಕಲಬೆರಕೆಯಾಗಿಲ್ಲ ಮತ್ತು ಆ ಸ್ಯಾಂಪಲಿನಲ್ಲಿ ಕಬ್ಬಿಣದ ಚೂರುಗಳು ತೀರಾ ಅತ್ಯಲ್ಪ ಪ್ರಮಾಣದಲ್ಲಿರುವುದಾಗಿಯೂ (ಅಂದರೆ ಶೇ. ೧.೦೦೨೨) ಮತ್ತು ಅದು ಆರೋಗ್ಯಕ್ಕೆ ಹಾನಿಕರವಲ್ಲವೆಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ,

ಕೆ ಎಂ. ದೊಡ್ಡಿಯಲ್ಲಿರುವ ಚಾಮುಂಡೇಶ್ವರಿ ಸಕ್ಕರೆ ಲಿಮಿಟೆಡ್ ಅವರು ಬಿಡುಗಡೆ ಮಾಡಿದ ಸಕ್ಕರೆಯಲ್ಲಿ ಕಬ್ಬಿಣದ ಚೂರುಗಳು ಮತ್ತು ಕಪ್ಪು ಧೂಳು ಇರುವುದಾಗಿ ಮಂಡ್ಯ ಜಿಲ್ಲೆ ಡೆಪ್ಯೂಟಿ ಕಮಿಷನರ್ ಅವರು ವರದಿ ನೀಡಿದ್ದಾರೆ. ಈ ಸಕ್ಕರೆಯನ್ನು ಗ್ರಾಹಕರಿಗೆ ಬಿಡುಗಡೆ ಮಾಡಿಲ್ಲ. ಈ ಸಕ್ಕರೆಯ ಸ್ಯಾಂಪಲನ್ನು ಅನಲಿಸ್ಟ್ ಅವರಿಗೆ ಕಳುಹಿಸಲಾಗಿದೆ ಅವರಿಂದ ವರದಿಯನ್ನು ನಿರೀಕ್ಷಿಸ ಲಾಗಿದೆ. ಮಂಡ್ಯ ಜಿಲ್ಲೆ ಡೆಪ್ಯೂಟಿ ಕಮಿಷನರ್ ಅವರು ಈ ವಿಷಯವನ್ನು ಪೋಲೀಸರಿಗೆ ತಿಳಿಸಿದ್ದಾರೆ. ಪೋಲೀಸರು ತನಿಖೆ ನಡೆಸುತ್ತಿದ್ದಾರೆ. ತರುವಾಯ, ಕಾರ್ಖಾನೆಯ ಚೀಫ್ ಕೆಮಿಸ್ಟ್ ಹಾಗೂ ಚೀಫ್ ಸೂಪರಿಂಟೆಂಡೆಂಟ್ ಅವರು ಸಗಟು ಮಾರಾಟ ಕೇಂದ್ರಕ್ಕೆ ಭೇಟಿ ಇತ್ತರು ಮತ್ತು ೨೦೦ ಮೂಟೆಗಳಲ್ಲಿ ಕಬ್ಬಿಣದ ಚೂರುಗಳ ಕಲಬೆರಕೆ ಸಕ್ಕರೆಯಿರುವುದನ್ನು ಗಮನಿಸಿದರು.

ಎಫ್.ಸಿ.ಎಸ್. ನಿರ್ದೇಶನಾಲಯದವರು ಮತ್ತು ಕೆ.ಎಫ್.ಸಿ.ಎಸ್.ಸಿ. ಯವರು ದಾಸ್ತಾನುಗಳ ತೀವ್ರ ತನಿಖೆ ನಡೆಸುತ್ತಿದ್ದಾರೆ ಹಾಗೂ ಕಲಬೆರೆಕೆಯಾಗಿರುವ ಸಂದರ್ಭಗಳಲ್ಲೆಲ್ಲಾ ಆ ಸಕ್ಕರೆಯು ಗ್ರಾಹಕರಿಗೆ ಮಾರಾಟವಾಗದಂತೆ ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ.

ಈ ವಿಷಯವನ್ನು ಕುರಿತು ಸೂಕ್ತ ವಿಚಾರಣೆ ನಡೆಸಲು ಈ ಮುಂದೆ ಹೇಳಿದವರು ಇರುವ ಸಮಿತಿ ಯೊಂದನ್ನು ರಚಿಸಲಾಗಿದೆ.

| | | | |
|---|---|---|---|
| ೧) | ಆಹಾರ ಮತ್ತು ಸಿವಿಲ್ ಸರಬರಾಜು ನಿರ್ದೇಶಕರು | ... | ಅಧ್ಯಕ್ಷರು |
| ೨) | ಸಕ್ಕರೆ ನಿರ್ದೇಶಕರು | ... | ಸದಸ್ಯರು |
| ೩) | ಶ್ರೀ ಎಂ. ವಿ. ನಿಡಗುಂಡಿ, ಸೀನಿಯರ್ ಸಕ್ಕರೆ ತಜ್ಞ ಕರ್ನಾಟಕ ಸಕ್ಕರೆ ಸಹಕಾರಿ ಮಂಡಳಿ, ಬೆಂಗಳೂರು. | ... | ಸದಸ್ಯರು |
| ೪) | ಸಿ. ಎಫ್. ಟಿ. ಆರ್. ಐ. ನಿರ್ದೇಶಕರು, ಮೈಸೂರು ಅಥವಾ ಅವರ ಪ್ರತಿನಿಧಿಗಳು. | ... | ಸದಸ್ಯರು |
| ೫) | ಸಹ ನಿರ್ದೇಶಕರು, ಆಹಾರ ಮತ್ತು ಸಿವಿಲ್ ಪೂರೈಕೆ ಇಲಾಖೆ | ... | ಸದಸ್ಯರು ಹಾಗೂ ಸಮಿತಿಯ ಕಾರ್ಯದರ್ಶಿ. |

ಸಕ್ಕರೆಯಲ್ಲಿ ಕಲಬೆರೆಕೆಯಾದ ರೀತಿಯನ್ನು ವಿಚಾರಿಸಿ, ಇದಕ್ಕೆ ಕಾರಣವಾದವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ೨ ತಿಂಗಳೊಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕೆಂದು ಈ ಸಮಿತಿಗೆ ತಿಳಿಸಲಾಗಿದೆ.

ಆ ಸಮಿತಿಯವರು ಏನು ಒಂದು ವರದಿಯನ್ನು ಕೊಡುತ್ತಾರೆ ಆದರ ಆಧಾರದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಕಾರ್ಖಾನೆಯವರು ಕಲಬೆರಕೆ ಮಾಡಿದ್ದಾರೆಯೇ ಅಥವಾ ಗೋಡೌನ್‌ನಲ್ಲಿ ಕಲಬೆರಕೆಯಾಗಿದೆಯೇ ಅಥವಾ ಮಾರಾಟವಾಗುವ ಜಾಗದಲ್ಲಿ ಏನಾದರೂ ಆಗಿದೆಯೇ ಎಂಬುದನ್ನು ಪತ್ತೆ ಹಚ್ಚಿ ಸರ್ಕಾರಕ್ಕೆ ಕೂಡಲೇ ವರದಿಯನ್ನು ಕೊಡುವಂತೆ ತೀರ್ಮಾನ ಮಾಡಿ ಆ ಒಂದು ಸಮಿತಿಯನ್ನು ನೇಮಿಸಿದ್ದೇವೆ. ಆ ಸಮಿತಿಯವರು ಕೊಡತಕ್ಕ ವರದಿಯ ಆಧಾರದ ಮೇಲೆ ಯಾರೇ ತಪ್ಪಿ ತಸ್ಥರಿರಲಿ. ಅವರ ಮೇಲೆ ಉಗ್ರವಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಜಿ. ಮಾದೇಗೌಡ.—ನನ್ನ ಅಭಿಪ್ರಾಯವನ್ನು ಮಾನ್ಯ ಸಚಿವರು ಗಮನಿಸಿದಂತೆ ಕಾಣುವುದಿಲ್ಲ ಮಂಡ್ಯದಲ್ಲಿ ೩ ನೂರು ಮೂಟೆ ಸಕ್ಕರೆ ಕಲಬೆರಕೆಯಾಗಿದೆ ಎಂದು ನನಗೆ ಅಂಕಿ ಅಂಶಗಳು ಬಂದಿವೆ; ಅದೇ ರೀತಿ ಕೆ.ಆರ್. ಪೇಟೆಯಲ್ಲಿ ೨ ನೂರು ಮೂಟೆ ಸಕ್ಕರೆ ಕಲಬೆರಕೆಯಾಗಿದೆ. ಈ ವಿಷಯಗಳನ್ನು ಸಾರ್ವಜನಿಕರು ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಆದರೂ ಕೂಡ ಆ ಅಧಿಕಾರಿಗಳು ಸಕ್ಕರೆ ಮೂಟೆಯನ್ನು ಸೀಸ್ ಮಾಡಿಲ್ಲ. ಯಾವ ಅಧಿಕಾರಿಗಳಾಗಲಿ, ಕಲಬೆರಕೆ ವಸ್ತುಗಳು ಸಿಕ್ಕಿದಾಗ ಅದು ಯಾವ ಕಾರ್ಖಾನೆಯದು ಎಂಬುದನ್ನು ಮೊದಲು ಪತ್ತೆ ಹಚ್ಚಬೇಕು. ಆಮೇಲೆ ಅದು ಕಾರ್ಖಾನೆಯಲ್ಲಿ ಆಯಿತೇ ಅಥವಾ ಗೋಡೌನ್‌ನಲ್ಲಿ ಆಯಿತೇ ಅಥವಾ ವ್ಯಾಪಾರಗಾರರ ಕೈಯಿಂದ ಆಯಿತೇ ಎಂಬುದನ್ನು ಕಂಡು ಹಿಡಿಯಬೇಕು. ಆದರೆ ಆ ಅಧಿಕಾರಿಗಳು ಏಕೆ ಆ ರೀತಿಯಾದ ಒಂದು ಪರೀಕ್ಷೆಯ ಕಾರ್ಯದಲ್ಲಿ ತೊಡಗಲಿಲ್ಲವೆಂದು ಕೇಳುತ್ತೇನೆ ೨೦೦ ಮೂಟೆ ಕಬ್ಬಿಣದ ಚೂರುಗಳಿರುವ ಸಕ್ಕರೆ ಯಾವ ಯಾವ ಸಹಕಾರ ಸಂಘಗಳಲ್ಲಿತ್ತು ಅಲ್ಲಿ ಮಾರನೇ ದಿವಸವೇ ಕಂಪನಿಯ ಆಡಳಿತ ಮಂಡಲಿಯವರು ಆ ಸಕ್ಕರೆಯ ಬದಲು ಬೇರೆ ಸಕ್ಕರೆಯನ್ನು ರೀಪ್ಲೇಸ್ ಮಾಡುವುದಕ್ಕೆ ಏತಕ್ಕೆ ಅವಕಾಶ ಕೊಟ್ಟರು? ಅಧಿಕಾರಿಗಳನ್ನು ನೀವು ಏತಕ್ಕೆ ಪ್ರಶ್ನೆ ಮಾಡಲಿಲ್ಲ. ಇವತ್ತು ಈ ಬಗ್ಗೆ ಪರಿಶೀಲನೆ ಮಾಡಲು ಒಂದು ಸಮಿತಿಯನ್ನು ಸರ್ಕಾರದವರು ರಚಿಸಿದ್ದಾರೆ, ಸಂತೋಷ. ಆದರೆ ಈ ಸಮಿತಿಯವರು ಹೋಗಿ ಏನು ವಿಚಾರಣೆ ಮಾಡುತ್ತಾರೆ? ಇವರು ಮಂಡ್ಯಕ್ಕೆ ಹೋಗಿ ವಿಚಾರ ಮಾಡುವ ಹೊತ್ತಿಗೆ ಕಬ್ಬಿಣದ ಚೂರು ಬೆರಕೆಯಾಗಿರತಕ್ಕ ಸಕ್ಕರೆ ಚೀಲ ಇರುವುದಿಲ್ಲ. ೧೫ ದಿವಸವಾದರೂ ಜಿಲ್ಲಾಧಿಕಾರಿಗಳಾಗಲಿ, ಎಸ್.ಪಿ. ಯವರಾಗಲೀ, ಆರೋಗ್ಯ ಇಲಾಖೆಯವರಾಗಲೀ ಏತಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲಿಲ್ಲ? ಈ ಬಗ್ಗೆ ವರದಿಯಲ್ಲಿ ಏನೂ ತಿಳಿಸಿಲ್ಲ. ಅಧಿಕಾರಿಗಳು ಮೌನವಾಗಿರುವುದಕ್ಕೆ ಕಾರಣವೇನು? ಈ ಕೆಲಸಕ್ಕೆ ಅನೇಕ ಜನ ಮುಖಂಡರ ಕೈವಾಡ ಇದೆ. ಅಧಿಕಾರಿಗಳ ಕೈವಾಡ ಇದೆ. ಅಧಿಕಾರಿಗಳು ಮುಖಂಡರಿಗೆ ಗುಲಾಮರಾಗಿದ್ದಾರೆ. ಇಲ್ಲದಿದ್ದರೆ ಅಧಿಕಾರಿಗಳು ಏತಕ್ಕೆ ಸುಮ್ಮನಿದ್ದಾರೆ? ಯಾರಾದರೂ ಒಬ್ಬ ಮನುಷ್ಯನ ಮೇಲೆ ಕಳ್ಳ ಎಂದು ಅನುಮಾನ ಬಂದರೆ ಅವನನ್ನು ಹಿಡಿದು ಲಾಕಪ್‌ನಲ್ಲಿ ಹಾಕುತ್ತಾರೆ. ಆದರೆ ಇಂಥ ಖದೀಮರನ್ನು ಹಿಡಿದು ಅವರ ಮೇಲೆ ಏತಕ್ಕೆ ಇನ್ನೂ ಸೂಕ್ತ ಕ್ರಮ ತೆಗೆದುಕೊಂಡಿಲ್ಲ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಯಾವ ಕಾನೂನಿನ ಅಡ್ಡಿ ಇತ್ತು; ಕೆಲವರು ಮುಖ್ಯ ಮಂತ್ರಿಗಳ ಹತ್ತಿರ ಹೋಗಿ ನಾವು ಸತ್ಯವಂತರು ಎಂದು ಹೇಳಿಕೊಳ್ಳುತ್ತಿದ್ದಾರೆ. ಯಾರೇ ಆಗಲೀ ತಪ್ಪು ಮಾಡಿದ ಖದೀಮರ ಬಗ್ಗೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇನೆ ಎಂಬ ಭರವಸೆಯನ್ನು ಮಾನ್ಯ ಮಂತ್ರಿಗಳು ನೀಡಬೇಕು

ಶ್ರೀ ಮಂಳ್ಳೂರು ಆನಂದರಾವ್.—ಮಾನ್ಯ ಸದಸ್ಯರು ಅಧಿಕಾರಿಗಳೂ ಇದರಲ್ಲಿ ಶಾಮೀಲಾಗಿದ್ದಾರೆ ಎಂದು ಹೇಳುತ್ತಾರೆ. ಅವರು ದಯವಿಟ್ಟು ಹೆಸರುಗಳನ್ನು ಹೇಳಿದರೆ ಅನುಕೂಲವಾಗುತ್ತದೆ.

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೇ, ನಾನು ಎರಡೇ ಎರಡು ವಿವರಣೆಯನ್ನು ಹೇಳಲಿತ್ತೇನೆ. ಹಾಲಿಗೆ ನೀರು ಹಾಕಿದರೆ ಅಥವಾ ಅಕ್ಕಿ ಬೇಳೆ ಮುಂತಾದವುಗಳಿಗೆ ಏನಾದರೂ ಮಿಶ್ರ ಮಾಡಿದರೆ Prevention of Adulteration Act ಪ್ರಕಾರ ಕೇಸ್ ಹಾಕುತ್ತಾರೆ. ತಪ್ಪಿತಸ್ಥರನ್ನು ಮರಣದಂಡನೆಗೂ ಗುರಿ ಮಾಡುವುದಕ್ಕೆ ಅವಕಾಶವಿದೆ. ಆದರೆ ಇಲ್ಲಿ ಸಕ್ಕರೆಯಲ್ಲಿ ಕಬ್ಬಿಣದ ಚೂರನ್ನು ಬೆರೆಸಿರುವವರ ಮೇಲೆ ಏತಕ್ಕೆ ಕೇಸ್ ಬುಕ್ ಮಾಡಿಲ್ಲ? ತಪ್ಪಿತಸ್ಥರನ್ನು ರಕ್ಷಣೆ ಮಾಡಬೇಕೆಂಬುದು ಸರ್ಕಾರದ ಉದ್ದೇಶವೇ? ಸಕ್ಕರೆಯನ್ನು ಪರೀಕ್ಷಿಸಿದ ಪಬ್ಲಿಕ್ ಅನಲಿಸ್ಟ್ ಅವರು ಸಕ್ಕರೆಯಲ್ಲಿ ಕಲಬೆರಕೆಯಾಗಿಲ್ಲ, ಕಬ್ಬಿಣದ ಚೂರು ಅತ್ಯಲ್ಪ ಪ್ರಮಾಣದಲ್ಲಿದೆ, ಇದು ಆರೋಗ್ಯಕ್ಕೆ ಹಾನಿಕರವಲ್ಲ ಎಂದು

ಹೇಳಿದ್ದಾರೆ. ಆ ರೀತಿ ಹೇಳುವುದು ಅವರ ಕರ್ತವ್ಯವಲ್ಲ. ಆರೋಗ್ಯಾಧಿಕಾರಿಗಳು ಇದನ್ನು ಹೇಳ ಬೇಕು. ಕಬ್ಬಿಣ ತಿಂದರೆ ಒಳ್ಳೆಯದೋ ಆಲ್ಲವೋ ಎಂಬುದನ್ನು ಆರೋಗ್ಯಾಧಿಕಾರಿಗಳು ಹೇಳಬೇಕು. ಪಬ್ಲಿಕ್ ಅನಲಿಸ್ಟ್ ಅವರು ಕಬ್ಬಿಣ ಬೆರೆತಿದೆಯೇ ಇಲ್ಲವೇ ಎಂಬುದನ್ನು ಹೇಳಬೇಕೇ ವಿನಹ ಅದನ್ನು ತಿಂದರೆ ಒಳ್ಳೆಯದೇ, ಕೆಟ್ಟದ್ದೇ ಎಂದು ಹೇಳುವುದು ಅವರ ಕರ್ತವ್ಯವಲ್ಲ. ಕಬ್ಬಿಣದ ಚೂರು ಹಾನಿಕರ ವಲ್ಲ ಎಂದು ಹೇಳುವುದಾದರೆ ಜನರೆಲ್ಲಾ ಕಬ್ಬಿಣದ ಚೂರುಗಳನ್ನೇ ತಿನ್ನಬಹುದಲ್ಲ. ತಮ್ಮ ಅಧಿಕಾರ ವ್ಯಾಪ್ತಿಗೆ ಮೀರಿ ಹೇಳಿಕೆ ಕೊಟ್ಟರುವ ಪಬ್ಲಿಕ್ ಅನಲಿಸ್ಟ್ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳ ಬೇಕು.

† ಶ್ರೀ ಸಿ.ಎಂ. ಇಬ್ರಾಹಿಂ (ಮಾನ್ಯ ಆಹಾರ ಮತ್ತು ಕಾರ್ಮಿಕ ಮಂತ್ರಿ).—ಸನ್ಮಾನ್ಯ ಸಭಾ ಧ್ಯಕ್ಷರೇ, ಸೀಸ್ ಮಾಡಿರುವ ೨೦೦ ಮೂಟೆ ಸಕ್ಕರೆ ಚೀಲ ನಮ್ಮ ಹತ್ತಿರ ಇದೆ. ಅದನ್ನು ಗೋಡೌನ್‌ನಲ್ಲಿ ಇಟ್ಟಿದ್ದೇವೆ. ಈಗಾಗಲೇ ಸೂಪರಿಂಟೆಂಡೆಂಟ್ ಅವರು ಯಾರು ತಪ್ಪು ಮಾಡಿದ್ದಾರೆಂದು ಗೊತ್ತಾಗಿದೆಯೋ ಅವರಿಗೆ ವಿವರಣೆ ಕೇಳಿದ್ದಾರೆ. ಇದರ ಮಧ್ಯೆ ಏನು ವರದಿ ಬರುತ್ತದೆ ಎಂಬುದನ್ನೂ ಕಾಯುತ್ತಿದ್ದೇವೆ. ವರದಿ ಬಂದಮೇಲೆ ತಪ್ಪಿತಸ್ಥರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳುತ್ತೇವೆ. ತಪ್ಪಿತಸ್ಥರನ್ನು ಉಳಿಸಬೇಕು ಎಂಬ ಉದ್ದೇಶ ಸರ್ಕಾರಕ್ಕೆ ಖಂಡಿತ ಇಲ್ಲ. ತಪ್ಪು ಮಾಡಿರತಕ್ಕವರು ಎಂಥ ದೊಡ್ಡ ಸ್ಥಾನದಲ್ಲೇ ಇರಲಿ ಅವರಿಗೆ ಸರ್ಕಾರ ಶಿಕ್ಷೆ ಕೊಡುತ್ತದೆ. ಯಾವ ಹಂತದಲ್ಲಿ ಈ ಮಿಶ್ರಣ ಆಗಿದೆ, ಗೋಡೌನ್‌ನಲ್ಲೋ ಫ್ಯಾಕ್ಟರಿಯಲ್ಲೋ ಅಥವಾ ಅಂಗಡಿಯಲ್ಲೋ ಎಂಬುದನ್ನು ನೋಡುತ್ತಿ ದ್ದಾರೆ. ಸಮಗ್ರವಾಗಿ ತನಿಖೆ ನಡೆಸಿ ಅದರ ವರದಿ ಬಂದಮೇಲೆ ನಾವು ಸೂಕ್ತ ಕ್ರಮ ತೆಗೆದುಕೊಳ್ಳು ತ್ತೇವೆ. ಲ್ಯಾಬೋರೇಟರಿ ರಿಪೋರ್ಟ್ ಸರಿಯಲ್ಲ ಎಂಬ ವಾದವನ್ನು ಮಾನ್ಯ ಸದಸ್ಯರು ಇಟ್ಟಿದ್ದಾರೆ. ಆದ್ದ ರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಿತಿ ನೇಮಕ ಮಾಡಿ ಆದೇಶ ಕೊಟ್ಟಿದ್ದೇವೆ. ಕೂಲಂಕಷವಾಗಿ ಪರಿಶೀಲನೆ ಮಾಡಿ ಯಾವ ಹಂತದಲ್ಲಿ ಈ ಮಿಶ್ರಣ ಆಗಿದೆ ಎಂಬುದನ್ನು ನೋಡಿ ಮುಂದಿನ ಕ್ರಮ ತೆಗೆದು ಕೊಳ್ಳುತ್ತೇವೆ, ಪೋಲೀಸ್ ಸೂಪರಿಂಟೆಂಡೆಂಡ್‌ರವರು ವಿವರಣೆ ಕೇಳಿದ್ದಾರೆ. ಲ್ಯಾಬೋರೇಟರಿ ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದೇವೆ. ಅಲ್ಲಿಂದ ಉತ್ತರ ಬಂದಮೇಲೆ ಯಾರು ತಪ್ಪು ಮಾಡಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೋ ಅಂಥವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಜಿ. ಮಾದೇಗೌಡ.—ಮಾನ್ಯ ಮಂತ್ರಿಗಳು ೨೦೦ ಮೂಟೆ ಸಕ್ಕರೆ ಸರ್ಕಾರದ ಬಳಿ ಇದೆ ಎಂದು ಹೇಳಿದ್ದಾರೆ. ಎಲ್ಲ ಸಕ್ಕರೆ ಮೂಟೆಗಳನ್ನು ಏತಕ್ಕೆ ಸೀಸ್ ಮಾಡಲಿಲ್ಲ? ಏತಕ್ಕೆ ಮೊದಲೇ ಕ್ರಮ ತೆಗೆದುಕೊಳ್ಳಲಿಲ್ಲ? ಒರಿಜಿನಲ್ ಮ್ಯಾನುಫ್ಯಾಕ್ಚರಿಂಗ್ ಪಾಯಿಂಟ್ ಏನಿದೆ ಮಂಡ್ಯಾದಲ್ಲಿ ಆಲ್ಲಿ ಗೋ ಡೌನ್‌ನಲ್ಲಿ ಕಲಬೆರಕೆಯಾಗಿರತಕ್ಕ ಮೂಟೆಗಳು ಇನ್ನೂ ಎಷ್ಟಿವೆ ಎಂಬುದನ್ನು ಏತಕ್ಕೆ ನೋಡಿಲ್ಲ? ಎಸ್.ಪಿ.ಯವರು ಏತಕ್ಕೆ ಗೌಡೌನನ್ನು ಸೀಸ್ ಮಾಡಲಿಲ್ಲ? ಈಗ ಮಾನ್ಯ ಮಂತ್ರಿಗಳು ವರದಿಯನ್ನು ಕಾಯುತ್ತಿದ್ದೇವೆ ಎಂದು ಕಾಯುತ್ತಿರುವುದೇಕೆ? ಯಾರಾದರೂ ಕಳ್ಳ ಎಂದು ಅನುಮಾನ ಬಂದರೆ ಅವನನ್ನು ಅರೆಸ್ಟ್ ಮಾಡುತ್ತಾರೆ. ಆದರೆ ಇಂಥ ಒಂದು ದೊಡ್ಡ ತಪ್ಪು ಮಾಡಿದವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ? ಎಸ್.ಪಿ.ಯವರಾಗಲೀ, ನಿಮ್ಮ ಅಧಿಕಾರಿಗಳಾಗಲೀ ಅವರಿಗೆ ಅಧಿಕಾರ ಇಲ್ಲ ಎಂದು ಹೇಳುತ್ತಾರೆ. ಏತಕ್ಕೆ ಅಧಿಕಾರ ಇಲ್ಲ? ಅವರಿಗೆ ಕ್ರಮ ತೆಗೆದುಕೊಳ್ಳತಕ್ಕ ಅಧಿಕಾರ ಇದೆ.

ಶ್ರೀ ಪಿ. ರಾಮದೇವ್.—ಪಬ್ಲಿಕ್ ಅನಲಿಸ್ಟ್ ಏನು ವರದಿ ಕೊಟ್ಟಿದ್ದಾರೆ ಅದು ಸರಿಯಲ್ಲ. ಆದ್ದರಿಂದ ಅದನ್ನು ಬೇರೆಯವರಿಗೆ ಕಳುಹಿಸುತ್ತೀರಾ ? ಭಾರತ ಸರ್ಕಾರದ ಲ್ಯಾಬೋರೇಟರಿಗೆ ಕಳಿಸಿ ದರೆ ಒಳ್ಳೆಯದು. ಅಲ್ಲಿ ಕಳುಹಿಸಿಕೊಟ್ಟರೆ ಅನುಮಾನ ಬಗೆ ಹರಿಯುತ್ತದೆ. ಮೊನ್ನೆ ಸಾಧು ಸಾವಿನ ಪ್ರಕರಣದಲ್ಲಿ ಯಾವ ರೀತಿ ಎರಡನೇ ಬಾರಿ ಪೋಸ್ಟ್‌ಮಾರ್ಟಂ ಪರೀಕ್ಷೆ ಮಾಡಿದ್ದಾರೋ ಆದೇ ರೀತಿ ಬೇರೆ ಅನಲಿಸ್ಟ್‌ಗೆ ಕಳುಹಿಸಿಕೊಟ್ಟು ಅವರ ಬಳಿ ಪರೀಕ್ಷೆ ಮಾಡಿಸಿ ವರದಿ ತರಿಸಿ.

† ಶ್ರೀ ಸಿ.ಎಂ. ಇಬ್ರಾಹಿಂ.—ನಾವು ಸಮಿತಿ ನೇಮಕ ಮಾಡಿದ್ದೇವೆ. ಈಗ ಪಬ್ಲಿಕ್ ಅನಲಿಸ್ಟ್ ಮಾಡಿರುವುದು ಸರಿಯಲ್ಲ ಎಂದು ಕಂಡುಬಂದರೆ ಬೇರೆ ಕಡೆ ಖಂಡಿತ ಪರೀಕ್ಷೆ ಮಾಡಿಸುತ್ತೇವೆ. ಬೇಕಾದರೆ ಹೊರ ರಾಜ್ಯಕ್ಕೆ ಕಳಿಸಿ ಪರೀಕ್ಷೆ ಮಾಡಿಸುವುದಕ್ಕೂ ತಯಾರಿದ್ದೇವೆ. ಇದು ಬಹಳ ಮಹತ್ವರವಾದ ವಿಷಯ. ಇದರ ಬಗ್ಗೆ ಮತ್ತೆ ಪರೀಕ್ಷೆ ಮಾಡಲು ಬೇರೆ ಅನಲಿಸ್ಟ್‌ಗೆ ಕಳುಹಿಸಿಕೊಡುವುದಕ್ಕೆ ಆದೇಶ ಕೊಡುತ್ತೇನೆ. ಮಾನ್ಯ ಮಾದೇಗೌಡರು ಗುಮಾನಿ ಬಂದಮೇಲೆ ಸಂಬಂಧಪಟ್ಟವರ ಮೇಲೆ ಏತಕ್ಕೆ ಕ್ರಮ

ತೆಗೆದುಕೊಳ್ಳುತ್ತಿಲ್ಲ ಎಂದು ಕೇಳಿದ್ದಾರೆ. ನಾವು ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕು ? ಎಲ್ಲಿ ಮಿಶ್ರಣ ಆಗಿದೆ ಎಂಬುದು ಗೊತ್ತಾಗದೇ ಏನು ಮಾಡುವುದಕ್ಕಾಗುತ್ತದೆ ? ಫ್ಯಾಕ್ಟರಿಯಲ್ಲಿ ಮಿಶ್ರಣ ವಾಗಿದೆಯೇ, ಗೋಡೌನ್‌ನಲ್ಲಿ ಆಗಿದೆಯೋ ಅಥವಾ ಹೊರಗಡೆ ಆಗಿದೆಯೇ ಎಂಬುದನ್ನು ನೋಡಬೇಕಾ ಗಿದೆ. ಎಸ್.ಪಿ. ಯವರು ವಿವರಣೆ ಕೇಳಿದ್ದಾರೆ. ಎಕ್ಸ್‌ಪ್ಲನೇಷನ್ ಬಂದಮೇಲೆ, ಲ್ಯಾಬೋರೇಟರಿ ರಿಪೋರ್ಟ್ ಬಂದ ಮೇಲೆ ನಾವು ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ತೀರ್ಮಾನ ಮಾಡುತ್ತೇವೆ ನನಗೆ ಬಂದಿರತಕ್ಕ ವರದಿ ಪ್ರಕಾರ ಸುತ್ತಮುತ್ತ ಪ್ರದೇಶದಲ್ಲಿ ಈ ರೀತಿ ಮಿಶ್ರಣವಾಗಿರುವುದು ಕಂಡು ಬಂದಿಲ್ಲ. ಬೇಕಾದರೆ ಅಧಿಕಾರಿಗಳಿಗೆ ಮತ್ತೊಂದು ಸಾರಿ ಪರೀಕ್ಷೆ ಮಾಡಿ ಎಂದು ಆದೇಶ ಕೊಡುತ್ತೇನೆ. ಮತ್ತೊಂದು ಸಾರಿ ಪರೀಕ್ಷೆ ಮಾಡಿ ಏನಾದರೂ ಮಿಶ್ರಣವಾಗಿದ್ದರೆ ಸಕ್ಕರೆಯನ್ನು ಸೀಸ್ ಮಾಡಿ ಎಂದು ಆದೇಶ ಕೊಡುತ್ತೇನೆ.

ಶ್ರೀ ಜಿ. ಮಾದೇಗೌಡ.—ನನಗೆ ಗೊತ್ತಿರುವ ಪ್ರಕಾರ ಫ್ಯಾಕ್ಟರಿಯ ಗೋಡನ್‌ನಲ್ಲೂ ಸಹಾ ಕಲ ಬೆರೆಕೆಯಾಗಿರುವ ಸಕ್ಕರೆಯ ಮೂಟೆಗಳು ಇವೆಯೆಂದು ತಿಳಿದುಬಂದಿದೆ. ಈ ವಿಚಾರ ಜಿಲ್ಲಾಧಿಕಾರಿಗಳ ವರಿಗೂ ಗೊತ್ತಿದೆ ಹಾಗೂ ಎಸ್.ಪಿ. ಅವರಿಗೂ ಗೊತ್ತಿದೆ. ಈ ರೀತಿ ಫ್ಯಾಕ್ಟರಿಯಲ್ಲಿ ಕಲಬೆರಿಕೆ ಸಕ್ಕರೆ ಇನ್ನೂ ಇದೆ. ಈ ಬಗ್ಗೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂಬ ಬಗ್ಗೆ ಮಾನ್ಯ ಮಂತ್ರಿ ಯವರು ಈಗ ಉತ್ತರವನ್ನು ಕೊಡಬೇಕು. ಈ ಬಗ್ಗೆ ಕಮಿಟಿ ಮಾಡಿ, ಆ ಕಮಿಟಿ ಅಲ್ಲಿಗೆ ನೋಡಲು ಹೋಗುವಷ್ಟರಲ್ಲಿ ಆ ಮೂಟೆಗಳನ್ನೆಲ್ಲಾ ಬೇರೆಲ್ಲಿಗಾದರೂ ಸಾಗಿಸಿರುತ್ತಾರೆ. ಒಂದು ಮೂಟೆಯೂ ನೋಡಲು ಸಿಗುವುದಿಲ್ಲ. ಇದು ನಡೆದು ಆಗಲೇ ೧೫ ದಿವಸಗಳಾದವು. ಅಲ್ಲಿ ೫೦೦ ರಿಂದ ೬೦೦ ಮೂಟೆ ಗಳವರೆಗೆ ಸಕ್ಕರೆ ಇದೆ. ಬೇರೆ ವಿಷಯಗಳಲ್ಲಿ ಯಾರ ಮೇಲಾದರೂ ಸಂಶಯ ಬಂದರೆ ತಕ್ಷಣ ಅವನನ್ನು ಬಂಧಿಸಿ ಅವನ ತಪಾಸಣೆ ಮಾಡಿ ಅವನ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಆದರೆ ಇಲ್ಲಿ ೧೫ ದಿನ ವಾದರೂ ಏನು ಕ್ರಮ ಕೈಗೊಂಡಿಲ್ಲ. ರಿಸಲ್ಟ್ ಬರುವುದಕ್ಕೆ ಏಕೆ ಕಾಯಬೇಕು?

ಶ್ರೀ ಸಿ. ಎಂ. ಇಬ್ರಾಹಿಂ.—ಇದರ ರಿಸಲ್ಟ್ ಬರುವುದಕ್ಕೆ ಮೊದಲೇ ಗುಮಾನಿಮೇಲೆ ನಾವು ಕ್ರಮ ತೆಗೆದುಕೊಳ್ಳಬಹುದು. ಆದರೆ ಆಮೇಲೆ ನಾವು ಪಟ್ಟಿ ಗುಮಾನಿ ಸುಳ್ಳು ಎಂದು ತಿಳಿದುಬಂದರೆ ಆಗಫ್ಯಾಕ್ಟರಿ ಯವರು ಸರ್ಕಾರದ ಮೇಲೆ ಕೇಸ್ ಹಾಕುತ್ತಾರೆ. ನಾವು ಗುಮಾನಿ ಮೇಲೆ ಕ್ರಮ ತೆಗೆದುಕೊಳ್ಳುವುದು ತಪ್ಪಾಗುತ್ತದೆ. ಈ ಫ್ಯಾಕ್ಟರಿಯವರೇ ಕಲಬೆರಕೆ ಮಾಡಿರಬಹುದೆಂದು ಹೇಳಬಹುದು. ಆದುದರಿಂದಲೇ ಎಸ್.ಪಿ. ಅವರು ಒಂದು ನೋಟೀಸನ್ನು ಅವರಿಗೆ ಕೊಟ್ಟಿದ್ದಾರೆ, ಅಲ್ಲಿ ಇದ್ದ ಕಲಬೆರಕೆ ಸಕ್ಕರೆ ಮೂಟೆ ಗಳನ್ನು ಸೀಸ್ ಮಾಡಲಾಗಿದೆ. ಮಾನ್ಯ ಸದಸ್ಯರು ಹೇಳಿದಂತೆ ಇನ್ನೂ ಅಲ್ಲಿ ಮೂಟೆಗಳು ಇದ್ದ ಪಕ್ಷದಲ್ಲಿ ಅವನ್ನೂ ಸೀಸ್ ಮಾಡಿ ಫುಡ್ ಅಂಡ್ ಸಿವಿಲ್ ಸಪ್ಲೈನಲ್ಲಿನ ಗೋಡೋನ್‌ನಲ್ಲಿ ಇಟ್ಟು ಸೀಲ್ ಮಾಡುವು ದಕ್ಕೆ ಈಗಲೇ ಅಧಿಕಾರಿಗಳಿಗೆ ಆದೇಶವನ್ನು ಕೊಡುತ್ತೇನೆ. ಯಾವ ಹಂತದಲ್ಲಿ ಈ ಕಲಬೆರಿಕೆ ಆಗಿದೆ ಎಂದು ತಿಳಿದು ಬಂದರೆ ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯ. ರಿಪೋರ್ಟ್ ಬರದೇ, ತಪ್ಪು ಯಾವ ಹಂತದಲ್ಲಿ ಆಗಿದೆ ಎಂಬುದು ತಿಳಿಯದೇ ಕ್ರಮ ತೆಗೆದುಕೊಳ್ಳಿ ಎಂದರೆ ಅದು ಹೇಗೆ ಸಾಧ್ಯ. ಇನ್ನೂ ಫ್ಯಾಕ್ಟರಿಯಲ್ಲಿ ಇಂತಹ ಸಕ್ಕರೆ ಉಳಿದಿದ್ದರೆ ಅದನ್ನು ಸೀಸ್ ಮಾಡುವುದಕ್ಕೆ ಈಗಲೇ ಅಧಿಕಾರಿ ಗಳಿಗೆ ವೈರ್‌ಲೆಸ್ ಮೆಸೇಜನ್ನು ಕಳುಹಿಸುತ್ತೇನೆನ್ನುವ ಆಶ್ವಾಸನೆಯನ್ನು ಕೊಡುತ್ತಿದ್ದೇನೆ. ಸಮಿತಿಯ ವರದಿ ಬಂದ ತಕ್ಷಣ ಯಾರು ತಪ್ಪುಮಾಡಿದ್ದಾರೆಂಬುದನ್ನು ತಿಳಿದು ಅವರ ಮೇಲೆ, ಅವರು ಯಾರೇ ಆಗಿರಲಿ ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇನೆ ಎನ್ನುವ ಆಶ್ವಾಸನೆಯನ್ನು ಕೊಡುತ್ತಿದ್ದೇನೆ.

## LEGISLATIVE BUSINESS

### The Karnataka Agricultural Produce Marketing (Regulation) (Amendment) Bill 1980

† ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಮಾನ್ಯ ಮಂತ್ರಿಗಳು ಈ ವಿಧೇಯಕವನ್ನು ಮಂಡನೆ ಮಾಡಿದ್ದಾರೆ. ಇದರ ಅಧ್ಯಯನ ಮಾಡುವುದರಲ್ಲಿ ನಾನು ಕರ್ತವ್ಯಲೋಪ ಮಾಡಿದ್ದೇನೆ. ಇದರ ಅಧ್ಯಯನ ಮಾಡುವುದು ನಮ್ಮ ಜವಾಬ್ದಾರಿ ಇದೆ. ಆಡಳಿತ ಪಕ್ಷದವರು ಒಂದು ತಿದ್ದುಪಡಿ ಮಸೂದೆಯನ್ನು ತಂದಾಗ ಅದರ ಅಧ್ಯಯನ ಮಾಡಿ ಆ ಬಗ್ಗೆ ತಮ್ಮ ಅಭಿಪ್ರಾಯ ಗಳನ್ನು ವ್ಯಕ್ತಪಡಿಸುವುದು ವಿರೋಧಪಕ್ಷದವರ ಕರ್ತವ್ಯ. ಬೇರೆ ಕೆಲಸಗಳ ಒತ್ತಡದಿಂದ ಈ ಬಿಲ್ಲನ್ನು